ಆಹಾರ ಅನ್ವೇಷಣೆ ಬಿಟ್ಟು ಬೇರೆ ಯಾವುದರ ಬಗ್ಗೆಯೂ ಚಿಂತಿಸದ ಇವುಗಳ ಮನದ ಮಾತು ಏನಿರಬಹುದು? ಒಡನಾಡಿಗಳ ಜೊತೆಗಿನ ಸಂಭಾಷಣೆ ಹೇಗಿರಬಹುದು? ಪ್ರೀತಿಯಂತೆ ಸಿಟ್ಟು ಸೆಡವನ್ನೂ ಪ್ರಕಟಿಸುವ ಇವಕ್ಕೆ ನೋವು, ಸಾವು ಅರ್ಥವಾಗಬಹುದೇ? ನನ್ನೊಂದಿಗೆ ಇವು ಮಾತಾಡಿದರೆ ಚೆನ್ನಾಗಿರುತ್ತದೆಯಲ್ಲವೇ? ಎಂದು ಬಹಳ ಸಲ ಯೋಚಿಸಿದ್ದೆ. ಅವುಗಳ ಜೊತೆಗಾರರಲ್ಲಿ ಒಬ್ಬನನ್ನು ನಾವು ಕೊಯ್ದು ತಿಂದಾಗ ಮನೆಯ ಸದಸ್ಯನೊಬ್ಬ ಕಮ್ಮಿಯಾಗಿದ್ದಾನೆಂದು ಅವು ಚಿಂತಿಸುವುದಿಲ್ಲವೇ? ನಮಗೆ ಮೊಟ್ಟೆ ಮಾಂಸ ಕೊಡಲಷ್ಟೇ ದೇವರು ಇವರನ್ನು ಸೃಷ್ಟಿಸಿದ್ದಾನೆಯೇ? ನನ್ನ ಸಿಟ್ಟು ಮತ್ತು ಸೇವೆಯನ್ನು ಇವು ದೇವನಲ್ಲಿ ಹೋದಾಗ ಹೇಳಬಲ್ಲವೇ? ಎಂಬ ತಳಬುಡವಿಲ್ಲದ ಹಲವಾರು ಪ್ರಶ್ನೆಗಳನ್ನು ನಾನು ಕೇಳಿಕೊಳ್ಳುತ್ತಿದ್ದೆ.

ಬಾತುಗಳು ಹೆಚ್ಚು ಕೆಸರಲ್ಲಿ ಆಡಿ ಬರುತ್ತಿದ್ದ ಕಾರಣ ಅವನ್ನು ಸಂಜೆ ಹಿಡಿದು ಸ್ನಾನ ಮಾಡಿಸಬೇಕಿತ್ತು. ಹಿಡಿಯಲು ಹೋದರೆ ಕಚ್ಚುತ್ತವೆ ಎಂದು ತೊಟ್ಟಿಯಲ್ಲಿ ನೀರು ನಿಲ್ಲಿಸಿ ಅತ್ತ ಕಡೆಗೆ ಅವನ್ನು ಓಡಿಸುತ್ತಿದ್ದೆ. ನೀರೆಂದರೆ ಪಂಚಪ್ರಾಣವಾದ ಅವು ತಮಗೆ ತೋಚಿದಂತೆ ತಾವೇ ಮಿಂದು ಬರುತ್ತಿದ್ದವು. ಕೋಳಿಗಳಿಗೆ ಅಷ್ಟು ಉಪಚಾರದ ಅಗತ್ಯವಿರಲಿಲ್ಲ. ನಡುವೆ ಕ್ಕೋ... ಕ್ಕೋ... ಆವ್... ಆವ್... ಎಂದು ಕರೆದು ಕಾಳು ಉಗ್ಗಿದರೆ ಬಂದು ತಿಂದು ಹೋಗುತ್ತಿದ್ದವು. ಮನೆಯಲ್ಲಿ ಉಳಿದ ನೀರಂಶದ ಕಸಮುಸುರೆ ಬಾತುಗಳಿಗೆ ಮೀಸಲು. ಕಲ್ಲಿನ ಬಾನಿನಲ್ಲಿ ಮುಸುರೆ ತಂದು ಸುರಿದರೆ ಸೌಟಿನಂಥ ಕೊಕ್ಕುಗಳ ಬಳಸಿ ಜಾಲಾಡಿಕೊಂಡು ಏನೇನೋ ಹುಡುಕಿಕೊಂಡು ಗಬಗಬ ತಿನ್ನುತ್ತಿದ್ದವು. ನನ್ನ ಮಗ ಮತ್ತು ಮಗಳು ಈಗ ನ್ಯೂಡಲ್ಸ್ ಮಾಡಿಕೊಂಡು ತಿನ್ನುವಾಗ ನನಗೆ ಆ ಬಾತುಗಳೇ ನೆನಪಿಗೆ ಬರುತ್ತವೆ.

ಆಕಾಶದಲ್ಲಿ ಹದ್ದುಗಳು ಬಂದರೆ ಮರಿಗಳೊಂದಿಗೆ ಇರುವ ತಾಯಿ ಕೋಳಿ ಮೊದಲು ಗಮನಿಸಿ ಎಲ್ಲರಿಗೂ ಮುನ್ನೆಚ್ಚರಿಕೆ ಕೊಡುತ್ತಿತ್ತು. ಆಗ ಪಿಳ್ಳೆಗಳೆಲ್ಲಾ ಓಡೋಡಿ ಬಂದು ತಾಯಿಯ ಮೈಯೊಳಗೆ ಹುದುಗಿ ಕುಳಿತುಕೊಳ್ಳುತ್ತಿದ್ದವು. ಬಾಲ್ಯದಲ್ಲೇ ತಾಯಿ ಕಳೆದುಕೊಂಡಿದ್ದ ನನಗೆ ಈ ದೃಶ್ಯ ಮಾತ್ರ ಬಹಳ ಹಿಂಸೆ ಕೊಡುತ್ತಿತ್ತು. ಹದ್ದು ನನ್ನ ತಾಯ ಪ್ರಾಣ ಹೊತ್ತುಕೊಂಡು ಹೋದ ಜಿಬ್ರೇಲರ ಹಾಗೆ ಕಾಣುತ್ತಿತ್ತು. ಕಲ್ಲು ಹುಡುಕಿ ಗುರಿಯಿಟ್ಟು ಹದ್ದಿಗೆ ಬಾರಿಸುತ್ತಿದ್ದೆ. ಆದರೆ, ಒಮ್ಮೆಯೂ ಅದರ ಸಣ್ಣ ಕೂದಲಿಗೂ ನನ್ನ ಕಲ್ಲು ತಾಕಲಿಲ್ಲ.

ಅತ್ತೆ ಮನೆ ಬಿಟ್ಟು ನಮ್ಮ ಹಳ್ಳಿ ಮನೆಗೆ ಹಿಂತಿರುಗಿದಾಗ ಅಲ್ಲಿ ಕುಕ್ಕಟಜಾತ್ರೆಯೇ ನನಗಾಗಿ ಕಾಯುತ್ತಿತ್ತು. ತೆಂಗಿನ ತೋಟದ ನಡುವೆ, ಹಳ್ಳದ ದಡದ ಮೇಲಿದ್ದ ನಮ್ಮ ಗುಡಿಸಲ ಎದುರಿಗೆ

